# ನಾಡಪ್ರೇಕ್ಷಕರ ಪಾಲಿಗೆ ಬೆರಗಿನ ಕಾಡುಪುಷ್ಪ

■ ವಿಶಾಖ ಎನ್.

**ನಾಯಕನೀಗ ಪ್ರತಿನಾಯಕನಾಗಿದ್ದಾನೆ. ಪೊಲೀಸ್ ಪದೇಪದೇ ಸೋಲುತ್ತಿದ್ದಾನೆ. ಮರಗಳ್ಳ, ಅದಿರುಗಳ್ಳ ಇಬ್ಬರೂ ಪೊಲೀಸರಿಗೆ ಪದೇಪದೇ ಚಳ್ಳೆಹಣ್ಣು ತಿನ್ನಿಸುತ್ತಿರುವವರೇ. ಪ್ರತಿನಾಯಕರನ್ನು ಮೆರೆಸುತ್ತಲೇ ಜನಪ್ರಿಯ ಕಥನಗಳನ್ನು ಯಶಸ್ಸಿನ ಹಳಿ ಮೇಲೆ ತಂದು ನಿಲ್ಲಿಸುತ್ತಿರುವ ದಕ್ಷಿಣ ಭಾರತದ ನಿರ್ದೇಶಕರ ಸೂತ್ರವೊಂದು 'ಪುಷ್ಪ' ಯಶಸ್ಸಿನ ಮೂಲಕ ಮತ್ತೆ ಚರ್ಚೆಗೆ ಒಳಗಾಗುತ್ತಿದೆ.**

'ಪುಷ್ಪ 2' ಸಿನಿಮಾ 'ಸಾವಿರ ಕೋಟಿ ಕ್ಲಬ್' ಸೇರುವುದರ ಜೊತೆಗೆ, ಈವರೆಗಿನ ಸಿನಿಮಾಗಳ ಗಳಿಕೆಯ ದಾಖಲೆಗಳನ್ನೆಲ್ಲ ಮೀರಿ ವಹಿವಾಟು ನಡೆಸಲಿದೆ ಎನ್ನುವ ಲೆಕ್ಕಾಚಾರ ಒಂದು ಕಡೆ. ಮರಗಳ್ಳನೊಬ್ಬನ ಸಿನಿಮಾಗೆ ಈ ಪರಿಯಾಗಿ ಚಪ್ಪಾಳೆ ತಟ್ಟಬೇಕೆ ಎಂಬ ಮುಖ್ಯವಾದ ಪ್ರಶ್ನೆ ಇನ್ನೊಂದು ಕಡೆ. ದಕ್ಷಿಣ ಭಾರತದ ಸಿನಿಮಾಗಳ ಬೀಸು ದಿನೇದಿನೇ ಬಾಲಿವುಡ್ ಓಣಿಗಳ 'ಜಡ'ಭರತರ ಜಂಘಾಬಲಕ್ಕೆ ಪೆಟ್ಟು ನೀಡುತ್ತಿರುವ ಹೆಮ್ಮೆ ಮಗದೊಂದು ಕಡೆ.

ಜನಪ್ರಿಯ ಸಿನಿಮಾಗಳ ಈ ಗೆಲುವಿನ ತಂತ್ರದಲ್ಲಿ ನಾಯಕನ ಪಾತ್ರ ಪೋಷಣೆಯ ಸೂತ್ರವೊಂದರ ಕಡೆಗೆ ನಾವು ಸೂಕ್ಷ್ಮನೋಟ ಬೀರಬೇಕಿದೆ. 'ಕೆಜಿಎಫ್'ನ ರಾಕಿ ಭಾಯಿ ತಾನು ಭಾರತಕ್ಕೇ ಸಿಇಒ ಎಂದು ಸರ್ಟಿಫಿಕೇಟ್ ಕೊಟ್ಟುಕೊಳ್ಳುತ್ತಾನೆ. 'ಬಾಹುಬಲಿ' ಬೆಟ್ಟವನ್ನೇ ಕಿತ್ತಿಟ್ಟ ಅತಿಶೂರ. ಈ ನಾಯಕರ ಪಾತ್ರಗಳ ಕಟೆಯುವಿಕೆಯನ್ನು ಗಮನಿಸಿದರೆ, ಇವರೆಲ್ಲ ಮಾನವಾತೀತ ಧೋರಣೆಗಳಿಂದ ಭರ್ತಿಯಾಗಿರುವಂಥವರು. ರಾಕಿ ಭಾಯ್ ಚಿನ್ನದ ಗಣಿಗಾರಿಕೆಯನ್ನು ಅಷ್ಟು ದೊಡ್ಡಮಟ್ಟದಲ್ಲಿ ಮಾಡುವ ಚಾಣಾಕ್ಷನಾದರೆ, ರಕ್ತಚಂದನದ ಅಕ್ರಮ ವಹಿವಾಟಿನಿಂದಲೇ ಕೂಲಿ ಆಳಾಗಿದ್ದವನು ಅರಸನಾದ ಭಾವಕ್ಕೆ ಜಿಗಿತ ಕಂಡವ ಪುಷ್ಪರಾಜ್. ಎಲ್ಲರೂ ದಂಡು ದಾಳಿಯನ್ನೆಲ್ಲ ಚೆಂದಿ ಮಾಡಬಲ್ಲ ಗಂಡಾಳುಗಳು. ಪುರುಷಾಹಂಕಾರದಲ್ಲಿ ಯಾರೂ ಕಡಿಮೆಯೇನಿಲ್ಲ.

ಧನಬಲದಿಂದ ಏನು ಬೇಕಾದರೂ ಮಾಡಬಹುದು ಎನ್ನುವ ನಂಬಿಕೆಯೊಂದು ಈ ಕಾಲದ ಬಹುತೇಕ ತರುಣ–ತರುಣಿಯರಲ್ಲಿ ಇದೆ. ಐಷಾರಾಮದ ಕನವರಿಕೆಯನ್ನು ಬಾಲ್ಯದಿಂದಲೇ ನೇವರಿಸುವ ಮನಸ್ಸಿನ ಇಂತಹ ಪ್ರೇಕ್ಷಕರನ್ನು ರಂಜಿಸಿದರೆ ಸಿನಿಮಾ ಯಶಸ್ವಿಯಾಗುವುದು ಶತಸ್ಸಿದ್ಧ ಎನ್ನುವ ಸೂತ್ರವೊಂದನ್ನು ಕಳೆದ ಒಂದೂವರೆ ದಶಕದಿಂದ ಉಜ್ಜಲಾಗುತ್ತಿದೆ. 'ಬಾಹುಬಲಿ'ಯ ಹೊಡೆದಾಟದ ಫ್ಯಾಂಟಸಿ, 'ಕೆಜಿಎಫ್'ನ ಅತಿದೊಡ್ಡ ಶಸ್ತ್ರಾಸ್ತ್ರಕ್ಕೆ 'ದೊಡ್ಡಮ್ಮ' ಎನ್ನುವ ಹೆಸರಿಡುವುದು, 'ಬಗ್ಗೋದೇ ಇಲ್ಲ' ಎಂದು ಪುಷ್ಪರಾಜ್ ಘನಕಾರ್ಯ ಮಾಡಿದವನಂತೆ ಗಡ್ಡ ನೀವಿಕೊಳ್ಳುವುದು... ಇವೆಲ್ಲವನ್ನೂ ನೋಡಿ ರೋಮಾಂಚಿತರಾಗುವ ಮನಸ್ಸುಗಳು ಹಣ, ಐಷಾರಾಮ, ಹಮ್ಮು, ಧಿಮಾಕು ಎಲ್ಲವುಗಳೂ ಸಾಕಾರಗೊಳ್ಳುವ ಚಹರೆಯೊಂದನ್ನು ಒಳಗಿಳಿಸಿಕೊಳ್ಳುತ್ತವೆ. ಬಿಟ್ಟ ಕಣ್ಣು ಬಿಟ್ಟಹಾಗೇ ನೋಡುತ್ತಾ 'ಗೂಸ್‌ಬಂಪ್ಸ್' ಎನ್ನುವ ಇಂತಹವರೇ ಸಿನಿಮಾಗಳಿಗೆ ಇವತ್ತು ದೊಡ್ಡ ಕಾಣ್ಕೆ ಸಲ್ಲಿಸುತ್ತಿರುವವರು.

ಬರೀ ತರುಣ–ತರುಣಿಯರು ನೋಡಿದರಷ್ಟೆ ಸಿನಿಮಾ ಗೆಲ್ಲುವುದು ಸಾಧ್ಯವಿಲ್ಲ ಎನ್ನುವುದೂ ನಿಜ. ಆದರೆ, ಅವರನ್ನು ಆಯಸ್ಕಾಂತೀಯವಾಗಿ ಚಿತ್ರಮಂದಿರಕ್ಕೆ ಎಳೆದುಕೊಂಡರೆ, ಅವರ ಬಂಧು–ಮಿತ್ರರು, ಪೋಷಕರು, ಮಕ್ಕಳು–ಮರಿಗಳೂ ತಾವಾಗಿಯೇ ಬರುತ್ತಾರೆ ಎನ್ನುವ ಮಾರುಕಟ್ಟೆ ತಂತ್ರ ಇಲ್ಲಿ ಕೆಲಸ ಮಾಡುತ್ತಿದೆ.

ಸೋಲನ್ನೇ ಕಾಣದ ನಿರ್ದೇಶಕ ರಾಜಮೌಳಿ ತಮ್ಮ ಸಿನಿಮಾಗಳಲ್ಲಿ

